CAREERINDIA

No. of Printed Pages : **5**

**6654**

*Register Number* | | | | | |

# Language — Part I — KANNADA — Paper I

**Time Allowed : 3 Hours ]** **[ Maximum Marks : 100**

**ಸೂಚನೆ :** (1) ಪ್ರಶ್ನೆ ಪತ್ರಿಕೆಯ ಮುದ್ರಣ ಸ್ಪಷ್ಟವಾಗಿದೆಯೇ ಎಂದು ಖಾತರಿಪಡಿಸಿಕೊಳ್ಳಿ. ಸ್ಪಷ್ಟತೆಯಲ್ಲಿ ಏನಾದರೂ ಕೊರತೆ ಇದ್ದಲ್ಲಿ ತಕ್ಷಣವೇ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿ.

(2) ಬರೆಯಲು ಮತ್ತು ಅಡ್ಡಗೆರೆ ಎಳೆಯಲು ನೀಲಿ ಅಥವಾ ಕಪ್ಪು ಶಾಹಿಯನ್ನು ಬಳಸಿರಿ ಹಾಗೂ ಆಕೃತಿಗಳನ್ನು ರಚಿಸಲು ಪೆನ್ಸಿಲ್ ಬಳಸಿರಿ.

**I.** ಈ ಕೆಳಗಿನವುಗಳಲ್ಲಿ **ಯಾವುದಾದರೂ ನಾಲ್ಕು** ಪ್ರಶ್ನೆಗಳಿಗೆ **ನಾಲ್ಕು** ಸಾಲುಗಳಿಗೆ ಮೀರದಂತೆ ಉತ್ತರಿಸಿ. **4x2=8**
Answer **any four** of the following in not more than **four** lines each.

**1.** ಬಡ ಬೋರೆಗೌಡನು ಹೊಟ್ಟೆಗೆ ಯಾವುದೂ ಸಿಗದಿದ್ದರೆ ಏನು ಮಾಡುತ್ತಾನೆ ?

**2.** ಕರಿಯಪ್ಪನಿಗೆ ಮದ್ಯಪಾನದ ರುಚಿ ನೋಡುವ ಆಸೆ ಏಕಾಯಿತು ?

**3.** ಧರ್ಮ ಎಂದರೆ ಏನು ?

**4.** ಗುಲ್‌ಕಂದನ್ನು ಹೇಗೆ ತಯಾರಿಸುತ್ತಾರೆ ?

**5.** ಸಂಸ್ಕೃತಿ ಎಂದರೇನು ? ಅದರ ಗುರುತುಗಳು ಯಾವುವು ?

**6.** ದ್ರೌಪದಿಯ ಸ್ವಯಂವರದ ವಿಚಾರ ಪಾಂಡವರಿಗೆ ಹೇಗೆ ತಿಳಿಯಿತು ?

**II.** ಈ ಕೆಳಗಿನವುಗಳಲ್ಲಿ **ಯಾವುದಾದರೂ ಮೂರು** ಪ್ರಶ್ನೆಗಳಿಗೆ **ಹತ್ತು** ಸಾಲುಗಳಿಗೆ ಮೀರದಂತೆ ಉತ್ತರಿಸಿ. **3x4=12**
Answer **any three** of the following in not more than **ten** lines each.

**7.** ಮುದುಕಿಯು ಬರೆದಿದ್ದ ರಂಗವಲ್ಲಿ ಹೇಗಿದ್ದಿತು ?

**8.** ನಾಗಿಯು ಕಾಡಿನಲ್ಲಿ ಯಾರನ್ನು ಹುಡುಕಲು ಆರಂಭಿಸಿದಳು ?

**9.** ಯಾವುದು ಗಂಧರ್ವರ ಸೀಮೆಯಾಯಿತು ? ಯಾಕೆ ?

**10.** ಕವಿಯ ಮನೆಯಲ್ಲಿರುವ ಸಾಮಾನುಗಳು ಯಾವುವು ?

**11.** ಕರ್ಣನಿಗೆ ಸಾರಥಿಯಾಗಲು ಶಲ್ಯನು ಒಡ್ಡಿದ ಶರತ್ತೇನು ?

[ Turn over

www.careerindia.com

CAREERINDIA



**III.** ಈ ಕೆಳಗಿನವುಗಳಲ್ಲಿ **ಯಾವುದಾದರೂ ಮೂರು** ಪ್ರಶ್ನೆಗಳಿಗೆ **ಹತ್ತು** ಸಾಲುಗಳಿಗೆ ಮೀರದಂತೆ ಉತ್ತರಿಸಿರಿ. **3x4=12**

Answer **any three** of the following in not more than **ten** lines each.

**12.** ಮಯೂರಧ್ವಜ ಮತ್ತು ಕಪಟ ಬ್ರಾಹ್ಮಣನಿಗೆ ನಡೆದ ಮಾತು–ಕತೆಗಳ ಸ್ವಾರಸ್ಯವನ್ನು ಬರೆಯಿರಿ.

**13.** ಹೋರಾಟದ ಪ್ರವಾಹದ ಪರಿಣಾಮವನ್ನು ವಿವರಿಸಿರಿ.

**14.** ಮಾನವೀಯತೆಯ ಬಗ್ಗೆ ಕವಿ ಹೇಳುವ ವಿಚಾರಗಳೇನು ?

**15.** ವಾಲ್ಮೀಕಿ ಜಾನಕಿಗೆ ಹೇಳಿದ ಮಾತುಗಳೇನು ?

**16.** ಮುದುಕಿಯು ಪ್ರತಿ ನಿತ್ಯವೂ ದೇವರಿಗೆ ಯಾವ ರೀತಿ ರಂಗವಲ್ಲಿ ಸೇವೆ ಮಾಡುತ್ತಿದ್ದಳು ?

**17.** ತನ್ನನ್ನು ಹೇಗೆ ಸಲಹಬೇಕೆಂದು ಬಸವಣ್ಣನವರು ಶಿವನಲ್ಲಿ ಕೇಳಿಕೊಂಡಿದ್ದಾರೆ ?

**IV.** ಈ ಕೆಳಗಿನವುಗಳಲ್ಲಿ **ಯಾವುದಾದರೂ ಒಂದನ್ನು** ಕುರಿತು **ಇಪ್ಪತ್ತು** ಸಾಲುಗಳಿಗೆ ಮೀರದಂತೆ ಉತ್ತರಿಸಿರಿ. **1x8=8**

Answer **any one** of the following in not more than **twenty** lines each.

**18.** ನೀರಿನ ಉಪಯೋಗಗಳೇನು ? ವಿಶದಪಡಿಸಿ.

**19.** ದ್ರೌಪದಿಯು ಪಾಂಡವರೆಲ್ಲರಿಗೂ ಪತ್ನಿಯಾಗಲು ಕಾರಣರು ಯಾರು ? ಏಕೆ ? ವಿವರಿಸಿರಿ.

**20.** ಕುಡುಕ ಕರಿಯಪ್ಪನ ದಾರುಣ ಕತೆಯನ್ನು ವಿವರವಾಗಿ ಬರೆಯಿರಿ.

**V.** ಈ ಕೆಳಗಿನವುಗಳಲ್ಲಿ **ಯಾವುದಾದರೂ ಒಂದಕ್ಕೆ ಇಪ್ಪತ್ತು** ಸಾಲುಗಳು ಮೀರದಂತೆ ವಿವರವಾಗಿ ಉತ್ತರಿಸಿರಿ.

Answer **any one** of the following questions in not more than **twenty** lines each. **1x10=10**

**21.** ದುರ್ಯೋಧನ ಶಲ್ಯರ ಗುಣ ಸ್ವಭಾವಗಳನ್ನು **"ಶಲ್ಯ ಸಾರಥ್ಯ"** ಪದ್ಯಭಾಗದ ಆಧಾರದಿಂದ ನಿರೂಪಿಸಿ.

**22.** 'ಮನೆಯಿಂದ ಮನೆಗೆ' ಕವನದ ಮುಖ್ಯ ಆಶಯವನ್ನು ವಿವರವಾಗಿ ಬರೆಯಿರಿ.

**23.** ಮಾದ್ರಿಯನ್ನು ಸೇರಿದ ಪಾಂಡುವಿಗಾದ ಅಂತ್ಯವನ್ನು ವಿವರವಾಗಿ ಬರೆಯಿರಿ.

www.careerindia.com

CAREERINDIA



**VI.** ಈ ಪದ್ಯಭಾಗವನ್ನು ಪೂರ್ಣಗೊಳಿಸಿ. **2x5=10**

Quote from memory.

**24.** ರತ್ನದ ರಸದಾ . . . . . . . . .
. . . . . . . . . . . . . . . . .
. . . . . . . . . . . . . . . . .
. . . . . . . ಪಟಪಟನೇ ಒಡೆದು.

**25.** ಧರಣಿಯ ಮೇಲೊಂದು . . . . . . . . . .
. . . . . . . . . . . . . . . . . . . . . .
. . . . . . . . . . . . . . . . . . . . . .
. . . . . . . . . . . ಕೂಡಲ ಸಂಗಮದೇವ.

**VII.** ಈ ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ ಎರಡಕ್ಕೆ** ಸಂದರ್ಭ ಸಹಿತ ವಿವರಿಸಿರಿ. **2x5=10**

Explain **any two** of the following questions as related to the context.

**26.** ನಗೆ ಕೊಲ್ಲುವಂತೆ ಹಗೆ ಕೊಲ್ಲಲಾರದು.

**27.** ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು.

**28.** ಪಶುನಾನು ಪಶುಪತಿ ನೀನು.

**29.** ಅಳುತ ಕೊಡುವವನ ದಾನಮಂ ಕೊಂಡಪರೆ ಬುಧರ್.

**VIII. (A)** ಈ ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ ಎರಡು** ಪ್ರಶ್ನೆಗಳಿಗೆ ಉತ್ತರಿಸಿರಿ. **2x5=10**

Answer **any two** of the following questions.

**30.** ಗುಣಸಂಧಿ ಅಥವಾ ಲೋಪಸಂಧಿಯನ್ನು ಉದಾಹರಣೆಯೊಂದಿಗೆ ವಿವರಿಸಿ.

**31.** ದ್ವಂದ್ವ ಸಮಾಸ ಅಥವಾ ಕ್ರಿಯಾ ಸಮಾಸವನ್ನು ಉದಾಹರಣೆಸಹಿತ ವಿವರಿಸಿ.

**32.** ರೂಪಕಾಲಂಕಾರ ಅಥವಾ ದೃಷ್ಟಾಂತ ಅಲಂಕಾರವನ್ನು ಉದಾಹರಣೆಯೊಂದಿಗೆ ವಿವರಿಸಿ.

**33.** ತ್ರಿಪದಿ ಅಥವಾ ಭಾಮಿನಿ ಷಟ್ಪದಿಯನ್ನು ಉದಾಹರಣೆಯೊಂದಿಗೆ ವಿವರಿಸಿ.



www.careerindia.com

CAREERINDIA



(B) ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ. 5x1=5

Match the following.

34. ರಂಗವಲ್ಲಿ – ಎ.ಆರ್. ಕೃಷ್ಣಶಾಸ್ತ್ರಿ

35. ಭರತ ಬಾಹುಬಲಿ – ಡಿ.ಕೆ. ರಾಜೇಂದ್ರ

36. ನಾವೆಲ್ಲರೂ ಒಂದೆ ಜಾತಿ – ಪು.ತಿ. ನರಸಿಂಹಾಚಾರ್ಯ

37. ದೇವಗಂಗೆ – ಗೋಪಾಲಕೃಷ್ಣ ಅಡಿಗ

38. ದ್ರೌಪದಿ ಸ್ವಯಂವರ – ರತ್ನಾಕರವರ್ಣಿ

IX. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೂ **ಸರಿಯಾದ** ಉತ್ತರವನ್ನು ಆರಿಸಿ ಬರೆಯಿರಿ. 15x1=15

Answer **all** the following questions choosing the **correct** answer from the options.

39. ಕನ್ನಡದ ಮೊದಲ ಕವಯಿತ್ರಿ __________.

(ಅ) ಸಂಚಿ ಹೊನ್ನಮ್ಮ (ಆ) ಮಹಾದೇವಿ ಅಕ್ಕ (ಇ) ಬೆಳವಡಿ ಮಲ್ಲಮ್ಮ

40. ಕನ್ನಡದ ಮೊದಲ ಗದ್ಯ ಕೃತಿ __________.

(ಅ) ಆದಿಪುರಾಣ (ಆ) ಭರತೇಶ ವೈಭವ (ಇ) ವಡ್ಡಾರಾಧನೆ

41. ಕನ್ನಡಕ್ಕೆ ಮೊದಲು ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಕವಿ __________.

(ಅ) ಶ್ರೀ ಕುವೆಂಪು (ಆ) ಶ್ರೀ ಪು.ತಿ.ನ. (ಇ) ಶ್ರೀ ಶಿವರಾಮ ಕಾರಂತ

42. 'ಪರೋಪಕಾರ' ಈ ಪದವನ್ನು ಬಿಡಿಸಿ ಬರೆದಾಗ __________.

(ಅ) ಪರರಿಂದ + ಉಪಕಾರ (ಆ) ಪರ + ಉಪಕಾರ (ಇ) ಪರ + ಅಪಕಾರ

43. ವಿದ್ಯೆ ಪದದ ತದ್ಭವ ರೂಪ ತಿಳಿಸಿ.

(ಅ) ಹೆಜ್ಜೆ (ಆ) ವಿಜ್ಯ (ಇ) ಬಿಜ್ಜೆ

44. ಮಹಾಕವಿ ಕುಮಾರವ್ಯಾಸನಿಗಿದ್ದ ಬಿರುದು ಯಾವುದು ?

(ಅ) ರೂಪಕ ಸಾಮ್ರಾಜ್ಯ ಚಕ್ರವರ್ತಿ

(ಆ) ಪ್ರೇಮಕವಿ

(ಇ) ನಿಸರ್ಗಕವಿ

45. ವಚನ ಸಾಹಿತ್ಯವು ಉದಯವಾದ ಕಾಲ ಯಾವುದು ?

(ಅ) 10 ನೇ ಶತಮಾನ (ಆ) 12 ನೇ ಶತಮಾನ (ಇ) 9 ನೇ ಶತಮಾನ

www.careerindia.com

CAREERINDIA



46. "ಅನುಭವ" ಪದದ ವಿರುದ್ಧ ಪದ :
    (ಅ) ಅನನುಭವ (ಆ) ಅನುಭಾವ (ಇ) ಅನಾನುಭವ

47. 'ಹೆಬ್ಬೆರಳು' ಈ ಪದದ ಸಮಾಸ :
    (ಅ) ದ್ವಂದ್ವ ಸಮಾಸ (ಆ) ಕ್ರಿಯಾ ಸಮಾಸ (ಇ) ಕರ್ಮಧಾರಯ ಸಮಾಸ

48. 'ತುಷಾರ' ಈ ಪದದ ಅರ್ಥ :
    (ಅ) ಹಿಮಬಿಂದು (ಆ) ಹಂಸ (ಇ) ವೀಣೆ

49. ಪಾಂಡುರಾಜ ತನ್ನ ರಾಣಿಯೊಂದಿಗೆ ವಾಸವಾಗಿದ್ದ ಪರ್ವತ :
    (ಅ) ವಿಂಧ್ಯಾ (ಆ) ಸಹ್ಯಾದ್ರಿ (ಇ) ಶತಶೃಂಗ

50. ಮುರಾಂತಕ ಎಂದರೆ :
    (ಅ) ಕರ್ಣ (ಆ) ಕೃಷ್ಣ (ಇ) ಶಿವ

51. "ವಿಕ್ರಮಾರ್ಜುನ ವಿಜಯಂ" ಎಂಬ ಕಾವ್ಯವು ಯಾವ ಛಂದಸ್ಸಿನಲ್ಲಿ ಬರೆಯಲಾಗಿದೆ ?
    (ಅ) ಚಂಪೂ (ಆ) ರಗಳೆ (ಇ) ಷಟ್ಪದಿ

52. "ಸಂಸ್ಕೃತಿ ಎಂದರೇನು ?" ಈ ಗದ್ಯದ ಲೇಖಕರು ಯಾರು ?
    (ಅ) ದೇವುಡು (ಆ) ಎನ್. ಪ್ರಹ್ಲಾದರಾವ್ (ಇ) ಜಿ. ರಾಮಕೃಷ್ಣ

53. 'ಬೈಗುಗಪ್ಪು' ಈ ಪದದಲ್ಲಿನ ಸಂಧಿ :
    (ಅ) ಆಗಮ ಸಂಧಿ (ಆ) ಆದೇಶ ಸಂಧಿ (ಇ) ಲೋಪ ಸಂಧಿ

- o O o -

www.careerindia.com